SC Criminal 60/2020
PW: 09
CW: 18

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>

## SESSIONS CASE : 60/2020

**ಪ್ರಾ.ಸಾ. 09**

**ದೋ.ಸಾ. 18**

| | | |
|---|---|---|
| ಸಾಕ್ಷಿಯ ಹೆಸರು | : | ಅರುಣ್ ಕುಮಾರ್ |
| ತಂದೆಯ ಹೆಸರು | : | ನಾರಾಯಣಸ್ವಾಮಿ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಮೊಬೈಲ್ ಟೆಕ್ನೀಷಿಯನ್ |
| ವಾಸ | : | ಬಂಡಿರಾಮನಹಳ್ಳಿ ಗ್ರಾಮ, ಗೌರಿಬಿದನೂರು ತಾಲ್ಲೂಕು |

**ದಿನಾಂಕ 10.12.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1). ಮೃತ ರಾಧಮ್ಮ ನನಗೆ ಗೊತ್ತಿಲ್ಲ. ಚಾಸಾ–19 ನನಗೆ ಗೊತ್ತು. ಉಳಿದ ಸಾಕ್ಷಿದಾರರು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿ ನನಗೆ ಗೊತ್ತು.

2). ಈಗ ಸಾಕ್ಷಿಗೆ ದಿಃ14–01–2020ರ ಆರೋಪಿ ವೆಂಕಟೇಶ್ ರವರ ಮಾದರಿ ಧ್ವನಿ ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ, ಅದರಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನಿಪಿ–17 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–17(ಎ) ಎಂದು ಗುರುತಿಸಲಾಯಿತು. ಸುಮಾರು 4–5 ವರ್ಷಗಳ ಹಿಂದೆ ಗೌರಿಬಿದನೂರು ಪೊಲೀಸರು ನನ್ನ ಹಾಗೂ ಚಾಸಾ–19ರವರನ್ನು ಠಾಣೆಗೆ ಕರೆದಿರುತ್ತಾರೆ. ಅಲ್ಲಿ ಆರೋಪಿ ವೆಂಕಟೇಶ್ ಇದ್ದರು. ಆರೋಪಿಯ ಮಾದರಿ ಧ್ವನಿ ಸಂಗ್ರಹಿಸಲು ಆರೋಪಿಗೆ ಪೋಲಿಸರು ಆತನ ಫೋನ್ ನಲ್ಲಿದ್ದ ಹಳೆಯ ಸಂಭಾಷಣೆಯನ್ನು ಓದಲು ಹೇಳಿರುತ್ತಾರೆ ಹಾಗೂ ಆರೋಪಿಯ ಮಾದರಿ ಧ್ವನಿಯನ್ನು ಸಂಗ್ರಹಿಸಿರುತ್ತಾರೆ. ಸದರಿ

ಧ್ವನಿಯನ್ನು ಮೆಮೊರಿ ಕಾರ್ಡ್ ಗೆ ಹಾಕಿರುತ್ತಾರೆ. ಆ ಸಮಯದಲ್ಲಿ ನಾನು ಮತ್ತು ಚಾಸಾ–19 ರವರು ಹಾಜರಿದ್ದೇವು. ಬೇರೆ ಯಾರು ಇದ್ದರು ಎಂದು ನಾನು ಗಮನಿಸಿರುವುದಿಲ್ಲ. ಆರೋಪಿಯ ಧ್ವನಿಯನ್ನು ಸಂಗ್ರಹಿಸುವಾಗ ಸಮಯ ಸುಮಾರು ಮಧ್ಯಾಹ್ನ 3.00 ರಿಂದ 3.30 ಗಂಟೆ ಆಗಿರಬಹುದು.

(ಈಗ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಸೀಲು ಮಾಡಲಾದ ಎನ್ವಲಪ್ ಕವರನ್ನು ತೆರೆಯಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು. ಸದರಿ ಎನ್ವಲಪ್ ಕವರನ್ನು ತೆರೆದು ನೋಡಲಾಗಿ ಅದರಲ್ಲಿ ಒಂದು ಸಿ.ಡಿ ಮತ್ತು ಒಂದು ಮೆಮೊರಿ ಕಾರ್ಡ್ ಇರುತ್ತದೆ.)

3). ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಸೀಲು ಮಾಡಲಾದ ಎನ್ವಲಪ್ ಕವರ್ ಮೇಲೆ ತನ್ನ ಸಹಿ ಇರುವುದನ್ನು ನೋಡಿ ಗುರುತಿಸಿದ್ದು, ಸದರಿ ಕವರ್ ನಲ್ಲಿದ್ದ ಸಿ.ಡಿ ಹಾಗೂ ಮೆಮೊರಿ ಕಾರ್ಡ್ ನ್ನು ನೋಡಿ ಗುರುತಿಸಿರುತ್ತಾರೆ. ಸಿ.ಡಿ ಯನ್ನು ಮು.ಮಾ–2 ಎಂದು ಮತ್ತು ಮೆಮೊರಿ ಕಾರ್ಡ್ ನ್ನು ಮು.ಮಾ–3 ಎಂದು ಗುರುತಿಸಲಾಯಿತು. ಆ ದಿನ ಪೊಲೀಸರು ಧ್ವನಿ ಸಂಗ್ರಹಿಸಿದ ವ್ಯಕ್ತಿಯು ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದು, ಸಾಕ್ಷಿ ಸದರಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎನ್ ವಕೀಲರಿಂದಃ**

4). ಮೆಮೊರಿ ಕಾರ್ಡ್ 8 ಜಿ.ಬಿ ಹಾಗೂ ಅದು ಖಾಲಿ ಇರುತ್ತದೆ. ಸಾಕ್ಷಿ ಸ್ವಇಚ್ಚೆಯಿಂದ ಮೆಮೊರಿ ಕಾರ್ಡ್ ಹಾಕಿದ ಕೂಡಲೇ ಅದರ ಸಾಮರ್ಥ್ಯ ಎಷ್ಟು ಇರುತ್ತದೆ ಎಂದು ತೋರಿಸಿರುತ್ತದೆ ಎಂದು ನುಡಿಯುತ್ತಾರೆ. ಮೊಬೈಲ್ ಟೆಕ್ನಿಷಿಯನ್ ಆಗಿ ನನಗೆ ತರಬೇತಿ ಇರುತ್ತದೆ. ನನಗೆ ತೆಲುಗು ಭಾಷೆ ಓದಲು ಹಾಗೂ ಮಾತನಾಡಲು ಬರುತ್ತದೆ ಆದರೆ ಬರೆಯಲು ಬರುವುದಿಲ್ಲ. ಸಾಕ್ಷಿ ಸ್ವಇಚ್ಚೆಯಿಂದ ಅದು ಆಡುಭಾಷೆ ಎಂದು ನುಡಿಯುತ್ತಾರೆ. ಪೊಲೀಸರು ಆರೋಪಿಯೇ ವೆಂಕಟೇಶ್ ಎಂದು ನಿಮಗೆ ಏನಾದರೂ ದಾಖಲೆ ತೋರಿಸಿರುತ್ತಾರಾ ಎಂದರೆ ಆರೋಪಿ ವೆಂಕಟೇಶ್ ಪೊಲೀಸ್

ಠಾಣೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ. ಮು.ಮಾ–2 ಡಿ.ವಿ.ಡಿಯಲ್ಲಿ ಯಾವಾಗ ಧ್ವನಿ ವರ್ಗಾವಣೆ ಮಾಡಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸಾಕ್ಷಿ ಸ್ವಇಚ್ಚೆಯಿಂದ ಮೆಮೊರಿ ಕಾರ್ಡ್ ಬಗ್ಗೆ ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನನ್ನ ಸಮಕ್ಷಮ ಆರೋಪಿ ವೆಂಕಟೇಶ್ ರವರ ಮಾದರಿ ಧ್ವನಿಯನ್ನು ಸಂಗ್ರಹಿಸಿರುವುದಿಲ್ಲ ಹಾಗೂ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಹೇಳಿದಂತೆ ನಾನು ಸುಳ್ಳು ಸಾಕ್ಷಿಯನ್ನುನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–17 ರಂತೆ ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಜರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
**(ಎನ್.ವಿ. ಭವಾನಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.